# ಸಿಡ್ನಿ ಕನ್ನಡ ಸಂಘದ ಕಿರೀಟಕ್ಕೆ ಮತ್ತೊಂದು ಮಣಿ

## ‘ಹಾಸ್ಯ ರಾಗ ರಂಜನಿ’

ಕಳೆದ ಮೂರು ವರ್ಷಗಳಿಂದ ಮೈ ಜಾಡಿಸಿಕೊಂಡು ಮೇಲೆದ್ದಿರುವ ಸಿಡ್ನಿ ಕನ್ನಡ ಸಂಘ ಪ್ರತಿವರ್ಷವೂ ಕರ್ನಾಟಕದಿಂದ ಕಲಾವಿದರನ್ನು ಆಹ್ವಾನಿಸಿ, ಕಾರ್ಯಕ್ರಮ ಏರ್ಪಡಿಸಿ, ತನ್ನ ವಾರ್ಷಿಕೋತ್ಸವವನ್ನು ಆಚರಿಸಿಕೊಳ್ಳುವ ಪರಿಪಾಠ ಪ್ರಾರಂಭಿಸಿದೆ. ಅದರಂತೆ ತನ್ನ ೨೨ನೇ ವಾರ್ಷಿಕ ಉತ್ಸವವನ್ನು ಕರ್ನಾಟಕದ ಕೋಗಿಲೆ ಶ್ರೀಮತಿ ಬಿ.ಆರ್.ಛಾಯಾ ಮತ್ತು ಪ್ರಥಮ ಹಾಸ್ಯಗಾರ್ತಿ (ಭಾಷಣಕಾರರಲ್ಲಿ) ಶ್ರೀಮತಿ ಸುಧಾ ಬರಗೂರ್ ರವರನ್ನು ಬರಮಾಡಿಕೊಂಡು ಸಿಡ್ನಿ ಕನ್ನಡಿಗರಿಗೆ ‘ಹಾಸ್ಯ ರಾಗ ರಂಜನಿ’ ಹೆಸರಿನ ಕಾರ್ಯಕ್ರಮವನ್ನು ದಿನಾಂಕ ೨೫ ಜೂನ್ ೨೦೦೫ ರಂದು ಸಿಡ್ನಿಯ ರೈಡ್ ಸಿವಿಕ್ ಸೆಂಟರ್, ಟಾಪ್ ರೈಡ್‌ನಲ್ಲಿ ಹಮ್ಮಿಕೊಂಡಿತ್ತು.



ಅಧ್ಯಕ್ಷ ಸ್ಯಾಮ್ ಗೋಪಿನಾಥ್

ಜೂನ್ ತಿಂಗಳ ಚಳಿ ಬೇರೆ. ಜೊತೆಗೆ ಮೂರು ವರ್ಷದಿಂದ ಬರಗಾಲ, ನೀರಿನ ಅಭಾವ ಎದುರಿಸುತ್ತಿರುವ ಸಿಡ್ನಿಯ ಜನತೆಗೆ ಸಂತಸ ತರಿಸುವಂತೆ ಹೊರಗೆ ಜಿಟಿಜಿಟಿ ಮಳೆಯ ನೀರಿನ ಝುರಿ, ಸಭಾಂಗಣದಲ್ಲಿ ಛಾಯಾರವರ ಗಾನಸುಧೆ, ಸುಧಾರವರ ಹಾಸ್ಯದ ಹೊನಲು. ಸಿಡ್ನಿಯ ಕನ್ನಡಿಗರಿಗೆ ಎಲ್ಲಿಲ್ಲದ ಸಂತಸ.

ವಿಶೇಷವೆಂದರೆ ಈ ಬಾರಿಯ ಸಿಡ್ನಿ ಕನ್ನಡ ಸಂಘದ ಕಾರ್ಯಕ್ರಮದಲ್ಲಿ ಮಹಿಳೆಯರದೇ ಮಿಂಚು. ಸೂಟು ಬೂಟುಗಳನ್ನು ಕಂಡು ಬೇಸತ್ತಿದ್ದ ಜನತೆಗೆ ಈ ಬಾರಿ ಮಿಣಮಿಣ ಮಿಂಚಿದ ರೇಷ್ಮೆ ಸೀರೆ, ಬಣ್ಣಬಣ್ಣದ ಸಲ್ವಾರ್ ಕಮೀಜ್. ಒಂದಿಬ್ಬರು ಪುರುಷರನ್ನು ಬಿಟ್ಟರೆ ಮಿಕ್ಕೆಲ್ಲಾ ಮಹಿಳೆಯರೆ. ಛಾಯಾ, ಸುಧಾ ಅವರ ಜೊತೆಗೆ ಕಾರ್ಯಕ್ರಮ ನಿರೂಪಿಸಿದ ಶ್ರೀಮತಿ ಅನು ಶಿವರಾಂ, ಛಾಯಾ ಜೊತೆಗೆ ವಿಶ್ವ ವಿನೂತನ ಹಾಡಿಗೆ ಧ್ವನಿಗೂಡಿಸಿದ ಶ್ರೀಮತಿ ಪುಷ್ಪ ಜಗದೀಶ್ ಮತ್ತು ಶ್ರೀಮತಿ ಗೀತ ಗೋಪಿನಾಥ್, ವಂದನಾರ್ಪಣೆ ಮಾಡಿದ ಡಾ.ನಾಗಮ್ಮ ಪ್ರಕಾಶ್...... ಪಟ್ಟಿ ಬೆಳೆಯುತ್ತಾ ಹೋಗುತ್ತೆ.



ಶ್ರೀಮತಿ ಅನು ಶಿವರಾಂ

ಸರಿಯಾಗಿ ೬.೩೦ಕ್ಕೆ ಪ್ರಾರಂಭವಾದ ಕಾರ್ಯಕ್ರಮದ ನಿರ್ವಹಣೆ ವಹಿಸಿದವರು ಶ್ರೀಮತಿ ಅನು ಶಿವರಾಂ. ಮೊದಲಿಗೆ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಗದೀಶ್ ಸೂರಿಯವರು ಸಾಂಪ್ರದಾಯಿಕ ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಅನು ಶಿವರಾಂ ತಮ್ಮ ಕಾರ್ಯಕ್ರಮ ನಿರೂಪಣೆಯಲ್ಲಿ ಶ್ರೀಮತಿ ಬಿ.ಆರ್.ಛಾಯಾರವರನ್ನು ಪರಿಚಯಿಸುತ್ತ ‘ಸಿಡ್ನಿಗೆ ಆಗಮಿಸಿದ ಎರಡನೇ ದಿನವೇ ಡಾರ್ಲಿಂಗ್ ಹಾರ್ಬರ್‌ನಲ್ಲಿ ಅಬಾರಿಜಿನಲ್ ಸಂಗೀತದೊಂದಿಗೆ ಕನ್ನಡ ಹಾಡನ್ನು ಹಾಡುತ್ತಾ ಕನ್ನಡವನ್ನು ಗಾಳಿಯಲ್ಲಿ ಗಂಧದಂತೆ ತೇಲಿಬಿಟ್ಟ ಸಂದರ್ಭವನ್ನು ತುಂಬಿದ ಸಭೆಗೆ ವಿವರಿಸಿದರು. ಆರು ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡಿರುವ ಬಿ.ಆರ್.ಛಾಯಾ ಹಾಡುಗಾರಿಕೆಯಲ್ಲಿ ತಮ್ಮ ಸ್ಪಷ್ಟ ಛಾಯೆಯನ್ನು ಕನ್ನಡಿಗರ ಮನದಲ್ಲಿ ಮೂಡಿಸಿರುವುದು ಅಚ್ಚರಿಯೇನಲ್ಲ.




ಬಿ.ಆರ್.ಛಾಯಾ

ಸ್ಪಷ್ಟ ಉಚ್ಚಾರಣೆ, ಸಹಜ ಏರಿಳಿತ, ಭಾವನೆಗಳ ಮಿಳಿತ – ಇದರಲ್ಲಿ ಛಾಯಾ ಪರಿಣಿತ. ಗಣೇಶನ ಸ್ತುತಿಯೊಂದಿಗೆ ತಮ್ಮ ಕಾರ್ಯಕ್ರಮ ಆರಂಭಿಸಿದ ಛಾಯಾ ತಮ್ಮ ಮೆಚ್ಚಿನ ಅಮೃತ ಘಳಿಗೆಯ ‘ಹಿಂದುಸ್ತಾನವು ಎಂದೂ ಮರೆಯದ’, ಎಚ್.ಎಸ್.ವಿ.ಯವರ ‘ಹುಚ್ಚು ಖೋಡಿ ಮನಸು’ ಹಾಡಿನಿಂದ ಮುದಗೊಳಿಸಿದರು. ಹುಚ್ಚು ಖೋಡಿ ಮನಸು, ಹದಿಹರೆಯವನ್ನು ನೆನಪಿಸಿದ್ದು ಸಹಜವಾಗಿತ್ತು. ಹಾಡುಗಳ ವಿವರಣೆಯನ್ನು ಛಾಯಾರವರ ಪತಿ ಶ್ರೀ ಪದ್ಮಪಾಣಿ ನೀಡುತ್ತಿದ್ದರು. ತಮ್ಮ ರಾಜ್ಯ ಪ್ರಶಸ್ತಿ ವಿಜೇತ ಗೀತೆ ‘ಇಬ್ಬನಿ ತಬ್ಬಿದ ಇಳೆಯಲಿ’ ಸುಶ್ರಾವ್ಯವಾಗಿ ಹಾಡಿದರು. ಭಾರತದ ಕೋಗಿಲೆ ಲತಾ ಮಂಗೇಶ್ಕರ್ ಹಾಡಿರುವ ‘ಬೆಳ್ಳನೆ ಬೆಳಗಾಯಿತು’ ಗೀತೆಯನ್ನು ಕನ್ನಡದ ಕೋಗಿಲೆ ಛಾಯಾ ಹಾಡಿದ್ದು ವಿಶೇಷ. ಇಂದ್ರಜಿತ್ ಚಿತ್ರದ ‘ಬೆಳ್ಳಿರಥದಲಿ ಸೂರ್ಯ’ ಯುಗಳ ಗೀತೆಯನ್ನು ಸ್ಥಳೀಯ ಹಾಡುಗಾರ ಶ್ರೀ ಶ್ರೀನಿವಾಸ್ ಜೊತೆಗೂ, ‘ಭಾಗ್ಯದ ಬಳೆಗಾರ’ ಗೀತೆಯನ್ನು ಶ್ರೀ ಪ್ರಕಾಶ್ ಜೊತೆಗೂ ಹಾಡಿದರು. ‘ಏ ಮೇರೆ ವತನ್ ಕೆ ಲೋಗೋಂ’ ಕನ್ನಡ ಅನುವಾದ ಗೀತೆ ‘ಓ ನನ್ನ ದೇಶ ಬಾಂಧವರೇ’ ಗೀತೆಗೆ ಹೆಚ್ಚಿನ ಕರತಾಡನ ಗಿಟ್ಟಿಸಿದ ಛಾಯಾಗೆ ‘ಝಿಲಿ ಝಿಲಿ ಝಿಲಿ ಝಿಲಕ್ಕು’ ಗೀತೆಗೆ ಪ್ರೇಕ್ಷಕರ ನೃತ್ಯವನ್ನೂ ವೀಕ್ಷಿಸುವ ಅದೃಷ್ಟ ಲಭಿಸಿತು. ಸುಮಾರು ಒಂದು ಗಂಟೆಗಳ ಕಾಲ ತಮ್ಮ ಮೊದಲ ಇನ್ನಿಂಗ್ಸ್ ಹಾಡಿದ ಛಾಯಾ ಜನರಿಗೆ ಹಾಡುಗಳ ಸವಿಯೂಟ ನೀಡಿದರು.



ಸುಧಾ ಬರಗೂರ್

ಕನ್ನಡ ಹಾಸ್ಯಲೋಕದಲ್ಲಿ ಘಟಾನುಘಟಿಗಳ ಮಧ್ಯದಲ್ಲೂ ತಮ್ಮ ವಿಶಿಷ್ಟ ಭಾಷಣದಿಂದಾಗಿ ಜನರ ಮನಸೆಳೆದು ಹೊಸ ನಕ್ಷತ್ರವಾಗಿ ಉದಯಿಸಿರುವ ಕನ್ನಡದ ಹಾಸ್ಯಗಾರ್ತಿ ಶ್ರೀಮತಿ ಸುಧಾ ಬರಗೂರ್‌ರವರನ್ನು ಪ್ರೇಕ್ಷಕರಿಗೆ ಶ್ರೀಮತಿ ಅನು ಶಿವರಾಂ ಪರಿಚಯಿಸಿದರು. ಮೇಷ್ಟ್ರಿಗೆ ಮೈಕ್ ಸಿಕ್ಕರೆ ವೇಸ್ಟ್ ಮಾಡೋದೇ ಇಲ್ಲ, ಎಂದು ಮೈಕ್ ಕಸಿದುಕೊಂಡ ಸುಧಾ ಮೊದಲಿಗೆ ಕಲಾವಿದರನ್ನು ಕರೆಸಿ, ಪ್ರೋತ್ಸಾಹ ನೀಡುತ್ತಿರುವ ಸಿಡ್ನಿ ಕನ್ನಡ ಸಂಘಕ್ಕೆ ಕೃತಜ್ಞತೆ ಸಲ್ಲಿಸಿ, ತಮ್ಮ ಹಾಸ್ಯ ವೈಖರಿಯನ್ನು ತೆರೆದಿಟ್ಟರು. ತಮ್ಮ ಹಾಸ್ಯಕ್ಕೆ ಚಪ್ಪಾಳೆ, ಶಿಳ್ಳೆ ಗಿಟ್ಟಿಸಿದ ಸುಧಾ 'ಬರೀ ಬೇಲೂರಿನಲ್ಲಿ ಮಾತ್ರ ಶಿಲ್ಪಿಗಳಿದ್ದಿದ್ದು ಅಂದುಕೊಂಡಿದ್ದೆ, ಇಲ್ಲೂ ಶಿಲ್ಪಿಗಳಿದ್ದಾರೆ' ಎಂದು ಶೀಟಿ ಹೊಡೆದ ಪ್ರೇಕ್ಷಕರಿಗೆ ಚಟಾಕಿ ಹಾರಿಸಿದರು. ಶ್ರೀಮತಿ ಸುಧಾ ಬರಗೂರರ ನಗೆ ಚಟಾಕಿ ಬೇರೆಯೇ ರೀತಿಯದು. ಸುಧಾರವರ ಧ್ವನಿ ತುಂಬಾ ಬೋಲ್ಡ್, ಅಲ್ಲದೆ ಬೇಗ ಅರ್ಥವಾಗುವಂಥಹುದು. ಅವರು ತೆಗೆದುಕೊಳ್ಳುವ ಹಾಸ್ಯ ನಿಜಜೀವನದಲ್ಲಿ ಎದುರಿಸಿರುವಂತಹುದು, ನಾವು ನೋಡಿರುವಂತಹುದು. ಆದರೆ ನಾವು ನೋಡುವ ದೃಷ್ಟಿಕೋನ ಮಾತ್ರ ಹಾಸ್ಯವಲ್ಲ. ಸುಧಾರವರು ಅದಕ್ಕೆ ಹಾಸ್ಯದ ಲೇಪನ ನೀಡಿ, ಅದನ್ನು ಜೀವನದಲ್ಲಿ ತೆಗೆದುಕೊಳ್ಳುವ ರೀತಿ ವಿವರಿಸಿದರು. ಹಾಸ್ಯದ ಸನ್ನಿವೇಶವನ್ನು ಪ್ರೇಕ್ಷಕರ ಮುಂದೆ ತೆರೆದಿಡುವ ರೀತಿ, ಧ್ವನಿಯ ಏರಿಳಿತ, ಚಿತ್ರಣ, ಇವೆಲ್ಲ ಬಣ್ಣಿಸುವ ಪರಿ, ಹೇಳುವ ರೀತಿ, ಹಾವ ಭಾವ ಇವೆಲ್ಲ ಸುಧಾಗೆ ಕರತಲಾಮಲಕ. ಅಲ್ಲದೆ ಮೊದಲ ಹಾಸ್ಯಗಾರ್ತಿ ಎಂಬ ಹೆಗ್ಗಳಿಕೆ. ಬರೀ ಗಂಡಸರು ಹೇಳುವ ಜೋಕುಗಳಿಗೆ ನಕ್ಕಿದ್ದ ಪ್ರೇಕ್ಷಕ, ಮಹಿಳೆ ಜೋಕುಗಳನ್ನು ಹೇಳಿದಾಗ ಬಹುಶಃ ನಗಲು ಪ್ರಾರಂಭದಲ್ಲಿ ಹಿಂದೇಟು ಹಾಕಿದ್ದರೂ (ಅಹಂ ? ?) ನಂತರದಲ್ಲಿ ನಗು ತಡೆ ಹಿಡಿಯಲು ಸಾಧ್ಯವಾಗದೆ, ಸ್ವಲ್ಪ ಬಾಯಿ ತೆರೆದು, ನಂತರ ಹಲ್ಕಿರಿದು, ಅನಂತರ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದು- ಸುಧಾರವರು ಹೇಳಿದ, ಎಲ್ಲರೂ ಅನುಭವಿಸಿದ್ದ ಜೀವನದ ಹಾಸ್ಯ ಘಟನೆಗಳಿಗೆ. ಆಗ ನನಗೆ ನೆನಪಾಗಿದ್ದು ವೈ.ಎಮ್.ಎನ್. ಮೂರ್ತಿಯವರು ಒಮ್ಮೆ ಹೇಳಿದ್ದ ಜೋಕು. "ಹ್ಯೂಮರ್ ಕ್ಲಬ್‌ನಲ್ಲಿ ಒಮ್ಮೆ ಒಬ್ಬರು ಜೋಕ್ ಹೇಳ್ತಿದ್ದರಂತೆ. ಎಲ್ಲರೂ ಬಿದ್ದು ಬಿದ್ದು ನಗುತ್ತಿದ್ದರೆ ಒಬ್ಬರು ಮಾತ್ರ ನಗದೆ ಗಂಭೀರವಾಗಿ ಕೂತಿದ್ದರಂತೆ. ಪಕ್ಕದವರು ಗಂಭೀರ ಪ್ರಿಯರಿಗೆ 'ನಿಮಗೆ ನಗು ಬರ್ತಾ ಇಲ್ವೆ' ಅಂತ ಆಶ್ಚರ್ಯವಾಗಿ ಕೇಳಿದರಂತೆ. ಅದಕ್ಕೆ ಗಂಭೀರ ಪ್ರಿಯರು ಹೇಳಿದರಂತೆ 'ನನಗೆ ನಗು ಬರ್ತಾ ಇದೆ. ಆದರೆ ಜೋಕ್ ಹೇಳ್ತಾ ಇರೋರಿಗೂ ನನಗೂ ಜಗಳ ಆಗಿದೆ ಅದಕ್ಕೆ ನಾನು ನಗ್ತಾ ಇಲ್ಲ, ಮನೆಗೆ ಹೋಗಿ ನಗ್ತೀನಿ' ಅಂತ." ಸುಮಾರು ೫೦ ನಿಮಿಷಗಳ ಕಾಲ ಸರಾಗವಾಗಿ ಮಾತನಾಡಿದ ಶ್ರೀಮತಿ ಸುಧಾ, ಮಕ್ಕಳು ತಂದಿಡುವ ಪೇಚಿನ ಪ್ರಸಂಗಗಳನ್ನು ಬಣ್ಣಿಸಿದ ರೀತಿ ಅಮೋಘ. ಗಂಡಸರು ಹೆಂಗಸರು ಇಬ್ಬರೂ ತೊಡಬಹುದಾದ ಆಭರಣವೆಂದರೆ 'ನಗೆ ಆಭರಣ' ಎಂದು ನಗುವನ್ನು ಬಣ್ಣಿಸಿದರು ಮತ್ತು ಈ ನಗುವಿನ ಆಭರಣವನ್ನು ಸದಾ ತೊಡುವಂತೆ ಎಲ್ಲರಿಗೂ ಕಳಕಳಿಯ ಮನವಿ ಮಾಡಿದರು



ಓಂಕಾರಸ್ವಾಮಿ ಗೊಪ್ಪೇನಹಳ್ಳಿ- ಡಾ.ನಾಗಮ್ಮ-ಸ್ಯಾಮ್ ಗೋಪಿನಾಥ್-
ಡಾ ಸಿದ್ಧಲಿಂಗೇಶ್ವರ ಒರೇಕೊಂಡಿ-ಶ್ರೀ ಜಗದೀಶ್ ಸೂರಿ

ಜನರ ಅಭಿರುಚಿ ಬಲ್ಲ ಸಿಡ್ನಿ ಕನ್ನಡ ಸಂಘದ ಅಧ್ಯಕ್ಷ ಸ್ಯಾಮ್ ಗೋಪಿನಾಥ್ ತಮ್ಮ ಅಧ್ಯಕ್ಷರ ಭಾಷಣದಲ್ಲಿ ಸಿಡ್ನಿ ಕನ್ನಡ ಸಂಘದ ೨೨ವರ್ಷದ ಸಾಧನೆ ಬಣ್ಣಿಸಿ, ತಮ್ಮ ಭಾಷಣವನ್ನು ಒಂದೇ ನಿಮಿಷದಲ್ಲಿ ಮುಗಿಸಿ ಜನರ ಚಪ್ಪಾಳೆ ಗಿಟ್ಟಿಸಿದರು. ಹಲವಾರು ವರ್ಷದಿಂದ ಸಾಹಸಪಟ್ಟು ಆರಂಭಿಸಿರುವ ಆಪ್ಕೋ (ಏಶಿಯಾ ಪೆಸಿಫಿಕ್ ಕನ್ನಡ ಒಕ್ಕೂಟ) ಕಾರ್ಯ ಪ್ರಾರಂಭಿಸಿರುವುದನ್ನು ಪ್ರಕಟಿಸಿದರು. ನಂತರ ಭೋಜನಕ್ಕೆ ಮೂವತ್ತು ನಿಮಿಷಗಳ ಅನುವು ಮಾಡಿಕೊಟ್ಟು, ವೇದಿಕೆಯೇರಿದ ಶ್ರೀ ಜಯಪ್ರಕಾಶ್ ಬರಗೂರರು ತಮ್ಮ ಡಾಕ್ಟರೊಡನೆ ಒಡನಾಟದ ಕೆಲವು ಹಾಸ್ಯ ಪ್ರಸಂಗಗಳ ಹಾಸ್ಯದ ಬೀಡಾ ಹಂಚಿದರು.

ನಂತರ ಆಪ್ಕೊ ರೂವಾರಿ ಶ್ರೀ ಓಂಕಾರಸ್ವಾಮಿ ಗೊಪ್ಪೇನಹಳ್ಳಿ ಯವರು ಮಾತನಾಡಿ, ತಮ್ಮ ಆಪ್ಕೊ ಕನಸು ನನಸಾದ ಬಗೆಯನ್ನು ವಿವರಿಸಿದರು. ಸಿಡ್ನಿ, ಮೆಲ್ಬೋರ್ನ್, ಅಡಿಲೇಡ್, ಕ್ಯಾನ್‌ಬೆರ್ರಾ, ಬ್ರಿಸ್‌ಬೇನ್, ನ್ಯೂಜಿಲ್ಯಾಂಡ್, ಹಾಂಗ್‌ಕಾಂಗ್, ಮಲೇಶಿಯಾ ಕನ್ನಡ ಸಂಘಗಳು ಆಪ್ಕೊ ಅಡಿಯಲ್ಲಿ ಬರುವ ಸಂಸ್ಥೆಗಳು. ಈ ಏಶಿಯ ಪೆಸಿಫಿಕ್ ಕನ್ನಡ ಒಕ್ಕೂಟದ ಹೆಸರನ್ನು ಸೂಚಿಸಿದವರು ಕಳೆದ ನವೆಂಬರ್‌ನಲ್ಲಿ ಸಿಡ್ನಿ ಕನ್ನಡ ಸಂಘದ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಪ್ರೊಫೆಸ್ಸರ್ ಎಂ.ಎಂ. ಕಲಬುರ್ಗಿಯವರು.

ಔಪಚಾರಿಕವಾಗಿ ಈ ಒಕ್ಕೂಟದ ಉದ್ಘಾಟನೆಯನ್ನು ನೆರವೇರಿಸಿದವರು ಯುನೈಟೆಡ್ ಇಂಡಿಯನ್ ಅಸೋಸಿಯೇಷನ್ (ಯು.ಐ.ಎ) ಅಧ್ಯಕ್ಷರಾದ ಹಾಗೂ ಕನ್ನಡದವರೇ ಆದ ಡಾ. ಸಿದ್ಧಲಿಂಗೇಶ್ವರ ಒರೇಕೊಂಡಿಯವರು. ಸಿಡ್ನಿಯಲ್ಲಿ SBS ರೇಡಿಯೋದಲ್ಲಿ ಕನ್ನಡ ಕಾರ್ಯಕ್ರಮ ಪ್ರಸಾರ ಪ್ರಾರಂಭವಾಗಲು ಕಾರಣರಾದ ಡಾ.ಮುದ್ದಪ್ಪ ಪ್ರಭುರವರನ್ನು ಕನ್ನಡ ಸಂಘ ಗೌರವಿಸಿದ್ದು ಒಂದು ವಿಶೇಷ. ನಂತರ ಡಾ.ಮುದ್ದಪ್ಪ ಪ್ರಭುರವರು ಕಲಾವಿದರನ್ನು ಸನ್ಮಾನಿಸಿ ಕಾಣಿಕೆಗಳನ್ನು ನೀಡಿದರು ಮತ್ತು ಸುಧಾ ಬರಗೂರ್ ರವರ 'ಡೋಂಟ್ ವರಿ ಮಾಡ್ಕೋಬೇಡಿ' ಸಿ.ಡಿ ಯನ್ನು ಸಹ ಬಿಡುಗಡೆ ಮಾಡಿದರು.


ಶ್ರೀ ಪದ್ಮಪಾಣಿ– ಡಾ.ಮುದ್ದಪ್ಪ ಪ್ರಭು

ತಮ್ಮ ಎರಡನೇ ಇನ್ನಿಂಗ್ಸನ್ನು ಭರ್ಜರಿಯಾಗಿ ಆರಂಭಿಸಿದ ಸುಧಾ ತಮ್ಮ ಮಾತಿನ ಚಮತ್ಕಾರದಿಂದ ಪ್ರೇಕ್ಷಕರನ್ನು ದಂಗು ಬಡಿಸಿದರು. ವೃತ್ತಿಗೂ, ಮಾತಿಗೂ ಹೇಗೆ ಸಂಬಂಧವಿದೆ ಎಂದು ಹಲವಾರು ನಗೆ ಹನಿಗಳನ್ನು ಚೆಲ್ಲಿದ ಮಾತಿನ ಜಾಣೆ, ೪೫ ನಿಮಿಷ ಮಾತನಾಡಿ, ಕೊನೆಯದಾಗಿ ಹೇಳಿದ ಹೈ ಟೆಕ್ ಮಹಿಳೆಯರ ರಾಗಿ ಮುದ್ದೆ ಮಾಡುವ ಕ್ರಮ ಹೈ ಕ್ಲಾಸ್ !! ಅವರ ಎಲ್ಲ ನಗೆ ಚಟಾಕಿಗಳನ್ನು ಖಂಡಿತ ಇಲ್ಲಿ ಬರೆಯಲು ಸಾಧ್ಯವೇ ಇಲ್ಲ. ಹಾಸ್ಯದ ಜೊತೆಗೆ ಜೀವನವನ್ನು ಸವಿಯುವ ಬಗೆಯನ್ನೂ ವಿವರಿಸಿ, ಕನ್ನಡತನವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗಲು ಸಿಡ್ನಿ ಕನ್ನಡಿಗರಿಗೆ ಕರೆ ನೀಡಿದರು.

ಬಿ.ಆರ್.ಛಾಯಾ ಸಹ ತಮ್ಮ ಎರಡನೇ ಇನ್ನಿಂಗ್ಸನ್ನು ಭರ್ಜರಿಯಾಗೇ ಪ್ರಾರಂಭಿಸಿದರು. 'ವಿಶ್ವವಿನೂತನ' ಹಾಡಿಗೆ ಶ್ರೀಮತಿ ಪುಷ್ಪ ಜಗದೀಶ್ ಮತ್ತು ಶ್ರೀಮತಿ ಗೀತ ಗೋಪಿನಾಥ್ ಧ್ವನಿ ಗೂಡಿಸಿದರು. 'ದೂರದಿಂದ ಬಂದಂಥ' ಹಾಡಿಗೆ ಎಲ್ಲರೂ ಕಾಲು ಜೋಡಿಸಿದ್ದು ಅಚ್ಚರಿಯೇನಲ್ಲ. 'ನಿನ್ನಂಥ ಅಪ್ಪ ಇಲ್ಲ' ಹಾಡಿಗೆ ಶ್ರೀ ಕೇದಾರನಾಥ್ ಜೊತೆಗೂಡಿದರು. ಕೊನೆಯದಾಗಿ 'ನಾವು ಬರುತೇವೆ, ನಮಸ್ಕಾರ' ಹಾಡಿನೊಂದಿಗೆ ತಮ್ಮ ಸುಮಧುರ ಕಂಠದ ಕಾರ್ಯಕ್ರಮಕ್ಕೆ ಮುಕ್ತಾಯ ಹಾಡಿದರು.




ಕಳೆದ ವರ್ಷ 'ಗಾನ ವಿನೋದ ಸಂಗಮ' ನಡೆಸಿದ್ದ ಸಿಡ್ನಿ ಕನ್ನಡ ಸಂಘ ಈ ಬಾರಿ 'ಹಾಸ್ಯ ರಾಗ ರಂಜನಿ'ಯನ್ನು ಆಪ್ಕೊ (ಏಶಿಯಾ ಪೆಸಿಫಿಕ್ ಕನ್ನಡ ಒಕ್ಕೂಟ) ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಿತು. ಈ ಹಾಸ್ಯ ರಾಗ ರಂಜನಿಯ ಪ್ರಮುಖ ಪ್ರಾಯೋಜಕರು, ಸಿಟಿ ಫ್ಲೋರೆಕ್ಸ್‌ನ ಶ್ರೀ ನರೇಂದ್ರ ನಾಯಕ್, ಸುಪ್ರೀಮ್ ಎಂಜಿನೀಯರಿಂಗ್‌ನ ಶ್ರೀ ಗಿರಿ ಭಟ್ ಮತ್ತು ಶ್ರೀಮತಿ ಭಾಗ್ಯ ಭಟ್ ಮತ್ತು ಲಿವರ್‌ಪೂಲ್ ಡಯಾಗ್ನಾಸ್ಟಿಕ್ಸ್‌ನ ಡಾ.ಜಾರ್ಜ್ ಕೂಹನ್, ಡಾ.ಮಾರ್ಕ್ ಕೂಹನ್, ಡಾ.ಬ್ರೂಸ್ ಜೊನ್ಸ್.

ಸಿಡ್ನಿ ಕನ್ನಡ ಸಂಘದ ಕಾರ್ಯಕಾರಿ ಸಮಿತಿಯು ಈ ಕಾರ್ಯಕ್ರಮಕ್ಕೆ ದುಡಿದ, ಸಹಕರಿಸಿದ ಎಲ್ಲರಿಗೂ ಪ್ರಾಯೋಜಕರಿಗೂ ತನ್ನ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸುತ್ತದೆ.

– ಬೆಳ್ಳಾವೆ ನಾಗಶಯನ
ಸಿಡ್ನಿ, ಆಸ್ಟ್ರೇಲಿಯ

